ಓಎಸ್ಃ 109/2014 ಪಿಡಬ್ಲ್ಯುಃ 1 ಸೋಮಣ್ಣ

ಸಾಕ್ಷಿಯನ್ನು ದಿಃ 21.01.2020 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ಮತ್ತು 2ನೇ ಪ್ರತಿವಾದಿಯರ ವಾರಸುದಾರರು ಹಾಗೂ ಪ್ರತಿವಾದಿ 3, 4 ಮತ್ತು 6 ರವರ ಪರ ಶ್ರೀ ಸಿ ಎ ಜಿ ವಕೀಲರಿಂದಃ

ದಾವೆಯನ್ನು ನಾನು ಸಲ್ಲಿಸಿರುವುದಿಲ್ಲ ನನ್ನ ತಾಯಿ ಸಲ್ಲಿಸಿರುತ್ತಾರೆ. ದಾವೆಯಲ್ಲಿ ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳನ್ನು ಸೇರಿಸಲಾಗಿರುತ್ತದೆ. ನನ್ನ ತಾತನ ಹೆಸರಿನಲ್ಲಿ ಒಂದು ಮನೆ ಇರುತ್ತದೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳಲ್ಲಿ ಇರುವ ವಿಷಯಗಳನ್ನು ತಿಳಿದುಕೊಂಡಿರುತ್ತೇನೆ. ನಾನು ಹಾಜರುಪಡಿಸಿರುವ ನಿಪಿ. 1 ರಿಂದ 3 ಪಹಣಿ ಪತ್ರಿಕೆಗಳಲ್ಲಿ ನನ್ನ ತಾತನ ವಾರಸುದಾರರಿಗೆ ವಿಭಾಗದ ಮೂಲಕ ಆಸ್ತಿಗಳು ಬಂದು ಪ್ರತ್ಯೇಕ ಖಾತೆ ಆಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ತಾತ ಮೃತಪಟ್ಟಾಗ ನನಗೆ 14 ವರ್ಷ ವಯಸ್ಸಾಗಿತ್ತು. ನನಗೆ 14 ವರ್ಷಕ್ಕೆ ತಿಳುವಳಿಕೆ ಇತ್ತು. ನಾನು ನನ್ನ ತಾತನ ಮನೆಯಲ್ಲಿ ವಾಸವಾಗಿರಲಿಲ್ಲ ಆದರೆ ನನ್ನ ತಾಯಿಯೊಂದಿಗೆ ಹೋಗಿ ಬರುತ್ತಿದ್ದೆನು. ನಾನು ನನ್ನ ತಾತನ ಮನೆಗೆ ಹೋಗಿ ಬರುತ್ತಿದ್ದೆ ಎಂದು ಈ ದಾವೆಗಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ದಾವೆ ಸಲ್ಲಿಸಿದ ನಂತರ 2013 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ ನಾನು ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ ಈ ದಾವೆಯಲ್ಲಿ ನನ್ನ ತಾಯಿಯ ಸಹೋದರಿಯರನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸುವ ನಲವತ್ತು ವರ್ಷಗಳ ಪೂರ್ವದಲ್ಲಿ ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ ಅವರವರ ಸ್ವಾಧೀನದಲ್ಲಿ ಅವರವರು

ಇರುತ್ತಾರೆ ಎಂದರೆ ಸರಿಯಲ್ಲ. ಅಕ್ರಮವಾಗಿ ಆಸ್ತಿ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳಲ್ಲಿ ನಮಗೆ ಭಾಗ ಬರಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 11 ನೇ ಪ್ರತಿವಾದಿ ಪರ ಶ್ರೀ ಜೆ ಆರ್ ಎಸ್ ವಕೀಲರಿಂದಃ

ನಮ್ಮ ತಾತನ ಹೆಸರು ಪಟೇಲ್ ಸಿದ್ದೇಗೌಡ ಇರುತ್ತದೆ. ಆತನಿಗೆ ಇಬ್ಬರು ಹೆಂಡತಿಯರು. 11 ನೇ ಪ್ರತಿವಾದಿಯ ಹೆಸರು ಗೋವಿಂದ ಅಃ ಗುಡೇಗೌಡ ಅಲ್ಲ ಅದು ಗೋವಿಂದೇಗೌಡ ಇರುತ್ತದೆ ಎಂದರೆ ಸರಿ. 11 ನೇ ಪ್ರತಿವಾದಿಯ ತಾಯಿಯ ಹೆಸರು ದೊಡ್ಡಹೆಣ್ಣು ಇರುತ್ತದೆ. ಆಕೆ ಪಟೇಲ್ ಸಿದ್ದೇಗೌಡರ ಮೊದಲನೇ ಹೆಂಡತಿಯ ಮೊದಲನೇ ಮಗಳು ಇರುತ್ತಾಳೆ. ಪಟೇಲ್ ಸಿದ್ದೇಗೌಡರ ಮರಣದ ನಂತರ ಅವರ ಆಸ್ತಿಗಳ ಕಂದಾಯ ದಾಖಲೆಗಳು ಕಿರಿಯ ಹೆಂಡತಿಯ ಮಗ 1 ನೇ ಪ್ರತಿವಾದಿ ಸಿದ್ದೇಗೌಡರವರ ಹೆಸರಿಗೆ ಬಂದಿರುತ್ತದೆ. 11 ನೇ ಪ್ರತಿವಾದಿ ಇತರೆ ಪ್ರತಿವಾದಿಗಳೊಂದಿಗೆ ಸೇರಿ ದಾಖಲಾತಿಗಳನ್ನು ಸೃಷ್ಠಿ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. 11 ನೇ ಪ್ರತಿವಾದಿಗೆ ದಾವಾಸ್ವತ್ತಿನಲ್ಲಿ ಹಕ್ಕು ಇರುತ್ತದೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-
ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.